**S.C 10007/2023**
P.W-6

**ಈ ದಿನ ದಿನಾಂಕಃ 24.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ**

1. ನಾನು ಬಿ ಬಿ ಎಂ ವ್ಯಾಸಂಗ ಮಾಡಿದ್ದೇನೆ. ಪೋಲಿಸರು ಬಿಗ್ ಮಾರ್ಕೆಟ್ ಗೆ ದಿನಾಂಕ 17.01.2023 ರಂದು ಬಂದಿದ್ದರು. ಕಂಪ್ಯೂಟರ್ ಮಾಹಿತಿ ನನಗೆ ಇರುತ್ತದೆ. ಪೆಬ್ರವರಿ 3ನೇ ತಾರೀಖಿನಂದು ನಾನು ದೃಶ್ಯಾವಳಿಗಳ ಪೆನ್ ಡ್ರೆವ್ ಪೋಲಿಸರಿಗೆ ಕೊಟ್ಟಿರುತ್ತೇನೆ. ಮೇಲಾಧಿಕಾರಿಗಳಿಂದ ಅನುಮತಿ ಪಡೆದುಕೊಂಡು ಕೊಟ್ಟಿದ್ದರಿಂದ ತಡವಾಗಿತ್ತು. ಸದರಿ ದಿನಾಂಕದಂದು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಜಪ್ತಿಯಾದ ಮದ್ದೆಮಾಲುಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೋಲಿಸರ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ದಿನಾಂಕದಂದು ಪೋಲಿಸರೊಂದಿಗೆ ಆರೋಪಿಯನ್ನು ಕರೆತರಲಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ